ವಿಜಯ ಕರ್ನಾಟಕ Namma Karavali, Puttur Edition, Page 1, 6.6.18, Edited by: Chandrakanth

### ವೀರಕಂಭ ಗ್ರಾಮದ ಮಜಿ ಸರಕಾರಿ ಹಿ.ಪ್ರಾ. ಶಾಲೆಯಲ್ಲೀಗ ಮಕ್ಕಳ ಕಲರವ

# ಸರಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ 4 ಪಟ್ಟು ಹೆಚ್ಚು!

■ **ಹರೀಶ್ ಮಾಂಬಾಡಿ** ಬಂಟ್ವಾಳ

ಪರಿಸರ ಮಿತ್ರ ಶಾಲೆ ಎಂದು ಎರಡೆರಡು ಬಾರಿ ಪ್ರಶಸ್ತಿ ಪಡೆದ ಬಂಟ್ವಾಳ ತಾಲೂಕಿನ ವೀರಕಂಭ ಗ್ರಾಮದ ಮಜಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಈ ವರ್ಷ 32. ಕಳೆದ ವರ್ಷಕ್ಕೆ ಹೋಲಿಸಿದರೆ ಇದು ನಾಲ್ಕು ಪಟ್ಟು ಹೆಚ್ಚು!

ಸರಕಾರಿ ಶಾಲೆಗೆ ಮಕ್ಕಳನ್ನು ಕಳಿಸಲು ಹಿಂದೇಟು ಹಾಕುವವರೇ ಜಾಸ್ತಿ ಇರುವ ಈ ಕಾಲಘಟ್ಟದಲ್ಲಿ ಸರಕಾರಿ ಶಾಲೆ ಎಂದರೆ ಮೂಗು ಮುರಿಯುವವರ ಸಂಖ್ಯೆ ಹೆಚ್ಚಳವಾಗುತ್ತಿದೆ ಎಂಬ ಕೂಗುಗಳ ಮಧ್ಯೆ ತಾಲೂಕಿನ ಸರಕಾರಿ ಶಾಲೆಗೆ ಈ ರೀತಿಯ ದಾಖಲಾತಿ ಶಾಲೆಯ ಶಿಕ್ಷಕ ವೃಂದಕ್ಕೆ ಖುಷಿ ತಂದಿದೆ.

ಕಳೆದೆರಡು ವರ್ಷಗಳಲ್ಲಿ 8 ಹಾಗೂ 10 ಮಕ್ಕಳಷ್ಟೇ ಹೊಸದಾಗಿ ಸೇರ್ಪಡೆ ಆಗಿದ್ದರು. ಆದರೆ ಈ ವರ್ಷ 32 ಮಕ್ಕಳು ಸೇರ್ಪಡೆಗೊಂಡಿದ್ದಾರೆ. ಒಟ್ಟು 124 ಮಕ್ಕಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂದು ಹೇಳುತ್ತಾರೆ ಮುಖ್ಯ ಶಿಕ್ಷಕ ನಾರಾಯಣ ಪೂಜಾರಿ ಎಸ್.ಕೆ.

**ಏನು ಕಾರಣ:** ಇತರ ಶಾಲೆಗಳಿಗೆ ಮಾದರಿಯಾಗುವಂತೆ ಕಲಿಕಾ ವ್ಯವಸ್ಥೆ, ಪರಿಸರ ಪರ ಕಾಳಜಿಯನ್ನು ಮೈಗೂಡಿಸುವ ಶಿಕ್ಷಕ ವೃಂದ, ಕಳೆದ ವರ್ಷ ಆರಂಭಗೊಂಡ ಪೂರ್ವ ಪ್ರಾಥಮಿಕ ಶಿಕ್ಷಣ(ಎಲ್‌ಕೆಜಿ, ಯುಕೆಜಿ), ಕನ್ನಡವಷ್ಟೇ ಅಲ್ಲ, ಖಾಸಗಿ ಶಾಲೆಗಳಿಗೂ ಕಮ್ಮಿ ಇಲ್ಲದಂತೆ ಸ್ಪೋಕನ್ ಇಂಗ್ಲಿಷ್ ಮತ್ತು ಬರೆಯುವ ಆಂಗ್ಲ ಭಾಷೆಯ ಶಿಕ್ಷಣವನ್ನು ಮಾತೃಭಾಷೆಯ ಜತೆಗೆ ವಿಶೇಷವಾಗಿ ನೀಡುವ ವ್ಯವಸ್ಥೆ ಇದಕ್ಕೆ ಕಾರಣ.

ಶಾಲೆಗೆ ಸಂತೋಷ್ ಶೆಟ್ಟಿ ಅರೆಬೆಟ್ಟು ಅವರು ಮಾತಾ ಡೆವಲಪರ್ಸ್‌ನ ಪ್ರಾಯೋಜಕತ್ವದಲ್ಲಿ ನಾಲ್ಕು ಶಿಕ್ಷಕಿಯರು ಮತ್ತು 1 ಸಹಾಯಕಿಯನ್ನು ಒದಗಿಸಿದ್ದರೆ, ನುರಿತ ಶಿಕ್ಷಕರ ತಂಡ 124 ಮಕ್ಕಳ ವೈಯಕ್ತಿಕ ಕಾಳಜಿಯನ್ನು ನೋಡುವಷ್ಟರ ಮಟ್ಟಿಗೆ ಪಾಠ ಮಾಡುತ್ತಿದ್ದಾರೆ. ಬಂಟ್ವಾಳ ತಾಲೂಕು ಫೋಟೋಗ್ರಾಫರ್ಸ್ ಅಸೋಸಿಯೇಶನ್, ಶಾಲಾಭಿವೃದ್ಧಿ ಸಮಿತಿ ಸಹಿತ ನಾನಾ ಸಂಘ, ಸಂಸ್ಥೆಗಳು ಶಾಲೆಗೆ ನೆರವಾಗುತ್ತಿವೆ. ಬೇರೆ ಶಾಲೆಗಳಿಗೆ ಕಳುಹಿಸುವ ಹೆತ್ತವರೂ ನಮ್ಮೂರಿನ ಶಾಲೆಗೇ ಏಕೆ ಕಳುಹಿಸಬಾರದು ಎಂಬ ಯೋಚನೆ ಮಾಡಿ ಈ ಶಾಲೆಯತ್ತ ಪ್ರೀತಿ ಇಟ್ಟು ಮಕ್ಕಳನ್ನು ಕಳುಹಿಸುವಂತಾಯಿತು.

ಲಾರ್ಸನ್ ಆ್ಯಂಡ್ ಟಾಬ್ರೋ ಕಂಪನಿಯ ಸಾಮಾಜಿಕ ಸೇವಾ ವಿಭಾಗದ ವತಿಯಿಂದ ಸೌರ ವಿದ್ಯುತ್, ಶೌಚಾಲಯ, ಕೈತೋಟ... ಹೀಗೆ ಸರಕಾರಿ ಶಾಲೆ ಖಾಸಗಿಗಿಂತಲೂ ಒಂದು ಕೈ ಮೇಲೆ ಎಂಬಂತಿದೆ.

**ಎಲ್ಲಿದೆ ಶಾಲೆ:** ಕಲ್ಲಡ್ಕದಿಂದ ವಿಟ್ಲ ಕಡೆಗೆ ಹೋಗುವಾಗ ವೀರಕಂಭದ ಎಡಭಾಗದಲ್ಲೇ ರಸ್ತೆ ಬದಿಯಲ್ಲಿ ಈ ಶಾಲೆ ಇದೆ. ರಸ್ತೆಯಿಂದ ಏಳೆಂಟು ಮೆಟ್ಟಿಲು ಹತ್ತಿದೊಡನೆ ಸಗಣಿ ಸಾರಿಸಿದ ಸ್ವಚ್ಛ ಅಂಗಳ ಕಾಣಲು ಸಿಗುತ್ತದೆ. ಏಳನೇ ತರಗತಿವರೆಗೆ ಶಿಕ್ಷಣ ಒದಗಿಸಲಾಗುವ ಈ ಶಾಲೆಯಲ್ಲಿ ಆಟ, ಪಾಠದೊಂದಿಗೆ ಕೃಷಿ ಕುರಿತ ಜಾಗೃತಿ ಹಾಗೂ ಪರಿಸರ ಮಾಹಿತಿ ನೀಡುವುದು ವೈಶಿಷ್ಟ್ಯ.



ಮಜಿ ವೀರಕಂಭದಲ್ಲಿರುವ ದ.ಕ.ಜಿಪಂ ಹಿ.ಪ್ರಾ.ಶಾಲೆ

**97 ವರ್ಷದ ಶಾಲೆ**

ಮುಖ್ಯ ಶಿಕ್ಷಕ ಸಹಿತ ನಾಲ್ವರು ಅನುಭವಿ ಶಿಕ್ಷಕರ ತಂಡ, ಸುಂದರವಾದ ಶಾಲಾ ಕಟ್ಟಡ, ಬೇಕಾದ ಎಲ್ಲ ವ್ಯವಸ್ಥೆಗಳು ಇದ್ದರೂ ಮಜಿ ಶಾಲೆ ವಿದ್ಯಾರ್ಥಿಗಳ ಕೊರತೆಯನ್ನು ಅನುಭವಿಸುತ್ತಿತ್ತು. ಆದರೆ ವಿದ್ಯಾರ್ಥಿಗಳನ್ನು ಕಳುಹಿಸಲು ಪೋಷಕರು ಆಸಕ್ತಿ ತೋರಿರುವುದು ಶಾಲಾ ಪ್ರೇಮಿಗಳಿಗೆಸಂತಸ ತಂದಿದೆ. ನೂರು ವರ್ಷ ಆಗುವ ಸಂದರ್ಭ ಶಾಲೆ ಮತ್ತಷ್ಟು ಬೆಳಗಬೇಕು ಮಕ್ಕಳ ಸಂಖ್ಯೆ ಜಾಸ್ತಿ ಆಗಬೇಕು ಎಂಬುದು ಸ್ಥಳೀಯರ ಆಶಯ.